ದಿ. ೧೩-೧೧-೨೦೧೭ ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ. ಎಸ್.ಎ.ಎಫ್. ವಕೀಲರಿಂದಃ-

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ನೀಡಿರುತ್ತೇನೆ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನ್ನ ಮಾಹಿತಿಯ ಪ್ರಕಾರ ಸರಿ ಮತ್ತು ಸತ್ಯವಾಗಿರುತ್ತವೆ. ಆ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ- ಮಾನ್ಯ ಅಧಿಕ ಸರ್ಕಾರಿ ನ್ಯಾಯವಾದಿಗಳಿಂದಃ-**

ನಾನು ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನ್ನ ತಂಗಿ ದೇವದಾಸಿ ಇದ್ದಳು ಅಂತಾ ಬರೆಸಿಲ್ಲ ಅಂದರೆ ಸರಿ. ನನ್ನ ತಂಗಿಯ ಅಡ್ಡ ಹೆಸರು ಚಲವಾದಿ ಅಂದರೆ ಸರಿಯಲ್ಲ. ವಾದಿಯ ಶಾಲಾ ಪ್ರವೇಶವನ್ನು ನಾನೇ ಪಡೆದುಕೊಂಡಿರುತ್ತೇನೆಂದರೆ ಸರಿ. ನಾನು ವಾದಿಯ ಶಾಲಾ ಪ್ರವೇಶ ಪಡೆದಕೊಳ್ಳುವ ಸಮಯದಲ್ಲಿ ಅಡ್ಡ ಹೆಸರ ಚಲವಾದಿ ಅಂತಾ ಮಾಹಿತಿ ನೀಡಿದ್ದೆನು ಅಂದರೆ ಸರಿಯಲ್ಲ. ನಾನು ವಾದಿಯ ಶಾಲಾ ಪ್ರವೇಶ ಪಡೆದುಕೊಳ್ಳುವ ಸಮಯದಲ್ಲಿ ಯಾವುದೇ ದಾಖಲೆಗಳನ್ನು ನೀಡಿಲ್ಲ ಅಂದರೆ ಸರಿ. ಶಾಲಾಧಿಕಾರಿಗಳು ನಾನು ನೀಡಿದ ಮಾಹಿತಿ ಪ್ರಕಾರ ಮತ್ತು ದಾಖಲೆಗಳನ್ನು ಪರಿಶೀಲಿಸಿ ವಾದಿಯ ಅಡ್ಡ ಹೆಸರನ್ನು ಚಲವಾದಿ ಅಂತಾ ದಾಖಲ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ವಾದಿಗೆ ತನ್ನ ಅಡ್ಡ ಹೆಸರು ಶಾಲಾ ದಾಖಲಾತಿಗಳಲ್ಲಿ ತಪ್ಪಾಗಿದ್ದ ಬಗ್ಗೆ ತನ್ನ ಮಗನ ಶಾಲೆಗೆ ಪ್ರವೇಶ ಪಡೆದುಕೊಳ್ಳುವ ಸಮಯದಲ್ಲಿ ಗೊತ್ತಾಗಿರುತ್ತದೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿಗೆ 2003 ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಾರ್ಮ ತುಂಬುವ ವೇಳೆ ತನ್ನ ಅಡ್ಡ ಹೆಸರು ಚಲವಾದಿ ಅಂತಾ ತಪ್ಪಾಗಿದ್ದ ಬಗ್ಗೆ ಗೊತ್ತಾಗಿತ್ತು ಅಂದರೆ ಸರಿಯಲ್ಲ. ನನ್ನ

ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ಸಂಗತಿಗಳು ಸುಳ್ಳು ಇರುತ್ತವೆ ಅಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು).
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

ಸಹಿ,
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಬಾಗಲಕೋಟ.